ಹೊರಹಾಕಲು ಹೋಗಿದ್ದರಲ್ಲವೆ. ಅಂತಹ ಹಲವಾರು ಅಪ್ರಿಯ ಪ್ರಸಂಗಗಳ ನಂತರವಲ್ಲವೇ ಬಾ ಮತ್ತು ಗಾಂಧಿ ಪರಸ್ಪರ ಅರಿತು ಬೆರೆತು ಒಂದಾಗಿ ತಾವೂ ಮುನ್ನಡೆದು, ದೇಶವನ್ನು ಮುನ್ನಡೆಸಿದ್ದು.

ಗಂಡ ಹೆಂಡತಿ ಮಧ್ಯದ ಜಗಳಗಳು ಸೋತು ಗೆಲ್ಲುವ ಜಗಳಗಳು. ಬಹಳಷ್ಟು ಸಂದರ್ಭದಲ್ಲಿ ಗೆಲುವು ಪತ್ನಿಯರದ್ದೇ. ಅವರು ಒಮ್ಮೆ ತಮ್ಮ ನಾಲಿಗೆಯ ಬಲದಿಂದ, ಕೆಲವೊಮ್ಮೆ ಕಣ್ಣೀರಿನ ಬಲದಿಂದ ಜಯ ಸಾಧಿಸುತ್ತಾರೆ. ಪತಿ ಮಹಾಶಯರು ಅದಕ್ಕಾಗಿ ಸ್ವಲ್ಪ ಬೆಲೆ ತರಬೇಕಾಗುತ್ತದೆ. ಪ್ರಲೋಭನೆಗಳನ್ನು ಒಡ್ಡಿ ಮುನಿದ ಮನದನ್ನೆಯನ್ನು ಒಲಿಸಿಕೊಳ್ಳಬೇಕಾಗುತ್ತದೆ. ಅದು ಪುರುಷ ತನ್ನ ಅಹಂಕಾರಕ್ಕಾಗಿ ತೆರಬೇಕಾದ ಬೆಲೆ ಕೂಡ. ಗಂಡಂದಿರನ್ನು ಹೇಗೆ ನಿಯಂತ್ರಿಸಬೇಕು ಎಂದು ಒಬ್ಬರು ಖ್ಯಾತ ಗಾಯಕಿ ಎಂಎಸ್ ಸುಬ್ಬಲಕ್ಷ್ಮಿ ಅವರನ್ನು ಕೇಳಿದಾಗ, 'yield a little then you can have your way' ಎಂದು ಉತ್ತರಿಸುತ್ತಾರೆ. ಅಡುಗೆ ಮನೆ ಹೆಂಡತಿಯರ ಆಯುಧ ಕೋಣೆ ಎಂದು ಹೇಳಲಾಗುತ್ತದೆ. ಅದನ್ನು ಅವಳು ಸಮಯೋಚಿತವಾಗಿ ಬಳಸುತ್ತಾಳೆ. ಒಲೆ ಉರಿದಾಗಲೇ ಅಲ್ಲವೆ ಜಿಹ್ವಾ ಚಪಲ, ಇನ್ನಿತರ ಚಪಲಗಳು ತಣಿಯುವುದು. ಬಾಯಿ ಚಪಲದ ಪುರುಷರಿದ್ದರೆ ಹೆಂಡತಿಯೊಂದಿಗಿನ ಜಗಳ ಬಹಳ ದುಬಾರಿ.

ಇನ್ನು ಮನಕೆ ಮನೋಹರವಲ್ಲದ ಗಂಡಂದಿರು ಅಥವಾ ಹೆಂಡಂದಿರು ಇದ್ದರೆ ನಿತ್ಯ ಕೌಟುಂಬಿಕ ನರಕ ತಪ್ಪಿದ್ದಲ್ಲ. 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪದು ಶಿವಂಗೆ' ಅನ್ನೋದೇನು ಸರಿ. ಆದರೆ, ಆ ಶಿವ ಅಂತಹ ದಾಂಪತ್ಯವನ್ನು ಎಲ್ಲರಿಗೂ ಕರುಣಿಸಬೇಕಲ್ಲ. ಎಲ್ಲದಕ್ಕೂ ಕಾರಣ ಅವನೇ ಅಲ್ಲವೇ. ಅಷ್ಟಕ್ಕೂ ಶಿವ ಪಾರ್ವತಿಯರ ಮಧ್ಯದ ವಿರಸದ ಪ್ರಸಂಗಗಳು ಕಡಿಮೆ ಏನಿಲ್ಲ. ಇನ್ನುಳಿದ ದೇವಾನುದೇವತೆಗಳ ಋಷಿಮುನಿಗಳ ಸರಸ, ವಿರಸ ಮುನಿಸುಗಳು, ಪರಸಂಗದ ಪ್ರಸಂಗಗಳು ಹಲವು. ದೇವತೆಗಳ ಪಾಡೇ ಹಾಗಾದರೆ ಇನ್ನು ಹುಲು ಮಾನವ ಸತಿಪತಿಗಳ ಮಧ್ಯದ ಸರಸ ವಿರಸಗಳು ಸಹಜವಲ್ಲವೇ.ಇನ್ನು ವಿರಸ ತೀರ ಹೆಚ್ಚಾದರೆ:

ಗಂಡ ಹೆಂಡಿರ ಜಗಳ ಕೆಸರ ಕಲಿಸಿದಾಂಗ<br>
ಲಿಂಗಕ್ಕ ರಾಡಿ ಎರದಂಗ<br>
ಬೆಣ್ಣಿ ಹಳ್ಳ ತುಂಬಿ ಹರಿದಾಂಗ

ಎಂದು ಹಾಡಬಹುದಷ್ಟೆ. ಆದರ್ಶ ದಾಂಪತ್ಯ ಅನ್ನುವುದು ಆದರ್ಶ ಸನ್ಯಾಸಿ ಆಗಿರುವುದಕ್ಕಿಂತ ಕಷ್ಟ ಎಂಬುದು ಅನುಭವಸ್ಥರ ಅಂಬೋಣ. ಸನ್ಯಾಸಿಗಳ ಅಥವಾ ಮಠಾಧಿಪತಿಗಳ 'ಆದರ್ಶಗಳು' ಆಗಾಗ ಅಲ್ಲಲ್ಲಿ ದೊಡ್ಡ ಪ್ರಮಾಣದಲ್ಲಿ ಬಯಲಿಗೆ ಬರುತ್ತಲೇ ಇರುತ್ತವೆ. ಎಲ್ಲವನ್ನು ತೊರೆದವರೇ ಹಾಗಿರಲು, ಇನ್ನು ಆದರ್ಶ ದಾಂಪತ್ಯ ಕಷ್ಟ ಸಾಧ್ಯ. ಆದರ್ಶ ಅನ್ನುವುದೇ ಸಾಪೇಕ್ಷ ಪದ. ಪ್ರತಿ ದಾಂಪತ್ಯವು ವಿಭಿನ್ನ. ಅದರಂತೆ ಆದರ್ಶವೂ ಭಿನ್ನವಾಗಿರುತ್ತದೆ.

'ನಾನು ಬಡವಿ ಆತ ಬಡವ ಒಲವೇ ನಮ್ಮ ಬದುಕು, ಬಳಸಿಕೊಂಡವದನೇ ನಾವು ಅದಕು ಇದಕು ಎದಕು' ಎಂದು ಬೇಂದ್ರೆಯವರು ಬಡತನದಲ್ಲಿ ಒಲವಿನ ಶ್ರೀಮಂತಿಕೆಯನ್ನು ದಾಂಪತ್ಯದಲ್ಲಿ ಬೆಸುಗೆಯಾಗಿ ಭಾವಿಸಿ, ಬಾಳಿ ಬದುಕಿದರು. ಈಗ ಸಿರಿವಂತಿಕೆ ದಾಂಪತ್ಯದಲ್ಲಿ ಮುಖ್ಯ ಬಿರುಕಿನ ಸರಕಾಗಿ ಕಂಡು ಬರುತ್ತಿರುವುದು ಬದುಕಿನ ವಿಪರ್ಯಾಸವಾಗಿದೆ. ಗಂಡು ಹೆಣ್ಣು ಸಮನಾಗಿ ದುಡಿಯುತ್ತಿರುವ ಯುವ ಪೀಳಿಗೆಗಳಲ್ಲಿ ದಾಂಪತ್ಯದಲ್ಲಿ ಬಿರುಕುಗಳು ಸಹಜವಾಗಿ ಕೋರ್ಟು ಕಟಕಟೆಗಳಿಗೆ ಬರುತ್ತಿರುವ ಕುರಿತು ನನ್ನ ಅನೇಕ ವಕೀಲ ಮಿತ್ರರು ಹೇಳುತ್ತಾರೆ. ಅದನ್ನು ನಾವು ಕೂಡ ನೋಡುತ್ತಿದ್ದೇವೆ. ಪ್ರೀತಿ ಹೆಚ್ಚಾಗಿ ಕೋರ್ಟ ಕಟಕಟೆಗೆ ಬಂದ, ಮೇಲೆ ಹೇಳಲಾದ ಪ್ರಕರಣವೊಂದು ಅಪವಾದ. ಹಾಗಾದರೆ 'ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ' ಎಂದು ಬಾಳಿ ಬದುಕಿದ ನಮ್ಮ ಜನಪದರ ಜೀವನ ವಿಧಾನ ಇಂದಿನ ಯುವ ಪೀಳಿಗೆಗಳಿಗಿಂತ ಮೇಲಲ್ಲವೇ.

'ಯಾವುದೇನೇ ಇರಲಿ ಪ್ರೀತಿಯಂಥಾ ವಸ್ತು ಭವದಲ್ಲಿ ಕಾಣೆ ಮನಗಂಡ ಮಾತು' '...ನನಗೆ ನೀನತಿ ಮಧುರ, ನಿನಗೆ ನಾ ಬಲು ಚನ್ನ' ಎಂಬ ಮಧುರಚನ್ನರ ಮಾತನ್ನು ಅಳವಡಿಸಿಕೊಂಡು ಮುನ್ನಡೆದಾಗಲೇ ದಾಂಪತ್ಯದಲ್ಲಿ ಗಂಧ ತೀಡಿದ ಪರಿಮಳ. ಇಷ್ಟಕ್ಕೂ 'ಗಂಡನಿಗೆ ಹೆಂಡತಿ ಸಮನಾದ ಮಿತ್ರರಿಲ್ಲ, ಆತ ರೋಗಿಯಾದರೆ ಸತಿಯಂತ ಬೇರೆ ಔಷಧಿ ಇಲ್ಲ, ಹೆಂಡತಿಗೆ ಸಮನಾದ ಬೇರೆ ಬಂಧು, ಬೇರೆ ದಿಕ್ಕು ಅವನಿಗೆ ಇಲ್ಲ' ಎಂದು ಮಹಾಭಾರತದಲ್ಲಿ ಹೇಳಲಾಗಿದೆ. ಇಷ್ಟರ ಮೇಲೆ ನಿಮ್ಮ ಇಚ್ಛೆ.

●